ಅ) ಈ ವಿಷಯದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 29424:94 ಬಾಕಿ ಇರುವುದರಿಂದ ರಿಟ್ ಅರ್ಜಿಯು ಇತ್ಯರ್ಥವಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಸರಕಾರಿ ಖಾಲಿ ಜಾಗವನ್ನು ಸ್ಟಾಕ್ ಎಕ್ಸ್‌ಚೇಂಜ್‌ಗೆ ನೀಡಿರುವುದು

2026 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುರತ್ಕಲ್ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಟ್ಟ ಬಂಗ್ರ ಕೂಳೂರು ಹತ್ತಿರ ಸರಕಾರದ ಖಾಲಿ ಜಾಗವನ್ನು ಸ್ಟಾಕ್-ಎಕ್ಸ್‌ಚೇಂಜ್ ಕಛೇರಿಯ ಕಟ್ಟಡ ಕಟ್ಟಲು ನೀಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಸ್ಥಳವನ್ನು ನೀಡಲಾಗಿದೆ, ಸರ್ವೆ ನಂಬರು ವಿವರವನ್ನು ಒದಗಿಸುವುದು;

ಇ) ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸರಕಾರಿ ಸ್ಥಳವನ್ನು ಯಾವ ಷರತ್ತಿನ ಮೇಲೆ ನೀಡಲಾಗಿದೆ?

(ವಿವರಗಳನ್ನು ಒದಗಿಸುವುದು)

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಕಟ್ಟಡ ಕಟ್ಟಲು ಜಾಗವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಪ್ರಶ್ನೆ (ಇ)ಗೆ ನೀಡಿರುವ ಉತ್ತರದ ವಿವರಗಳಂತೆ ಜಮೀನು ಪ್ರವೇಶಿಸಲು ಅನುಮತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಉದ್ಭವಿಸುವುದಿಲ್ಲ

ಇ) ಬಂಗ್ರ ಕೂಳೂರು ಗ್ರಾಮದ ಸರ್ವೆ ನಂ. 38:1ಎ1ಎ ರಲ್ಲಿನ ಒಟ್ಟು 12-58 ಎಕರೆ ಜಮೀನು ಹಿನ್ನೀರಿನಿಂದ ಜಲಾವೃತವಾಗಿದ್ದು, ಬೇರೆ ಯಾವುದೇ ಉದ್ದೇಶಕ್ಕೆ ಉಪಯೋಗಿಸಲು ಸಾಧ್ಯವಿಲ್ಲದ ಕಾರಣ ಈ ಪೈಕಿ 6-00 ಎಕರೆ ಪ್ರದೇಶವನ್ನು ಪೂರ್ಣವಾಗಿ ಅಭಿವೃದ್ಧಿ ಪಡಿಸಿಕೊಟ್ಟರೆ ಮಾತ್ರ 2-50 ಎಕರೆ ಪ್ರದೇಶವನ್ನು ಮಂಗಳೂರು ಸ್ಟಾಕ್ ಎಕ್ಸ್‌ಚೇಂಜ್‌ಗೆ ನೀಡುವುದಾಗಿ ಷರತ್ತು ವಿಧಿಸಿ ಜಮೀನು ಪ್ರವೇಶ ಮಾಡಲು ಅನುಮತಿ ನೀಡಲಾಗಿದೆ. ಹಾಗೂ ಉಳಿದ 3-50 ಎಕರೆ ಜಮೀನು ಅಭಿವೃದ್ಧಿ ಪಡಿಸಿದ ನಂತರ ಸರ್ಕಾರಿ ಕಛೇರಿಗೆ ಉಪಯೋಗಿಸಲಾಗುವುದು. ಮಂಗಳೂರು ಸ್ಟಾಕ್ ಎಕ್ಸ್‌ಚೇಂಜ್‌ನವರು ಜಮೀನು ಅಭಿವೃದ್ಧಿ ಪಡಿಸಿ ಕೊಟ್ಟ ನಂತರ ಅವರಿಗೆ ಸರ್ವೆ ನಂ. 38:1ಎ1ಎ ರಲ್ಲಿ 2-50 ಎಕರೆ ಜಮೀನು ಮಂಜೂರು ನೀಡುವ ಬಗ್ಗೆ ಪರಿಶೀಲಿಸಲಾಗುವುದು.

ಟೀ ನರಸೀಪುರ ತಾಲ್ಲೂಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಮಶಾನಗಳಿಲ್ಲದಿರುವ ಬಗ್ಗೆ

2328 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಟಿ. ನರಸೀಪುರ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಮಶಾನಗಳಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಊರುಗಳಾವುವು, ಅವುಗಳಿಗೆ ಸ್ಮಶಾನ ಜಾಗ ಕೊಡಲು ತೆಗೆದುಕೊಂಡಿರುವ ಕ್ರಮಗಳೇನು ಯಾವಾಗ ಸ್ಮಶಾನ ಜಾಗ ತೆಗೆದುಕೊಳ್ಳಬಹುದು, ಅವುಗಳಾವುವು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :